ಅಧ್ಯಕ್ಷರು : ಅವರು ನನಗೆ ಪತ್ರವನ್ನು ಇವತ್ತು 12.45 ಗಂಟೆಗೆ ಕೊಟ್ಟಿದ್ದಾರೆ, ಮೂರು ದಿವಸಗಳ ಹಿಂದೆ ತೆಗೆದುಕೊಳ್ಳಬೇಕಾಗಿತ್ತೂ ಎಂದು ಹೇಳಿದ್ದಾರೆ. ಆದುದರಿಂದ ಅದನ್ನು ಈಗ ತೆಗೆದುಕೊಳ್ಳಲಾಗುವುದಿಲ್ಲ ನಾವು ಪಕ್ಷದ ಉಪನಾಯಕರಾಗಿ ಸಹಕರಿಸಿ. ಸುಮ್ಮನೆ ರೈಸ್ ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ, ಸಂಬಂಧಪಟ್ಟ ಮಂತ್ರಿಗಳಿಗೆ ಅದನ್ನು ಕಳುಹಿಸಿಕೊಡುತ್ತೇವೆಂ ಸಮರ್ಪಕವಾದ ಉತ್ತರ ಬರಬೇಡವೇ? ಅವರು ಕೊಟ್ಟಿರುವುದನ್ನು ತೆಗೆದುಕೊಳ್ಳುತ್ತೇವೆ, ಆದರೆ ಇವತ್ತು ತೆಗೆದುಕೊಳ್ಳಲಾಗುವುದಿಲ್ಲ.

5. ಗಮನ ಸೆಳೆಯುವ ಸೂಚನೆ

ವಿಷಯ : (ಅ). ಹಾಸನ ತಾಲ್ಲೂಕು ವ್ಯಾವಸಾಯೋತ್ಪನ್ನ ಸಹಕಾರ ಮಾರಾಟ ಸಂಘದಲ್ಲಿ ನಡೆದಿರುವ ಅವ್ಯವಹಾರದಿಂದಾಗಿ ಸಂಘವು ಮುಚ್ಚುವ ಸ್ಥಿತಿಗೆ ಬಂದಿರುವುದು.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಅಧ್ಯಕ್ಷರೇ, ಹಾಸನ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರ್ಗ ಸಂಘದಲ್ಲಿ ನಡೆದಿರುವ ಅವ್ಯವಹಾರದಿಂದಾಗಿ ಸಂಘವು ಮುಚ್ಚುವ ಸ್ಥಿತಿಗೆ ಬಂದಿರುವುದರ ಬಗ್ಗೆ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) : ಅಧ್ಯಕ್ಷರೇ, ತಾಲ್ಲೋಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ನಿ), ಹಾಸನ, ಈ ಸಂಘವು ದಿನಾಂಕ 01-03-1949 ರಂದು ನೊಂದಾಯಿಸಲ್ಪಟ್ಟಿದ್ದು, ಈ ಸಂಘದಲ್ಲಿ 'ಎ' ತರಗತಿಯ 33, 'ಬಿ' ತರಗತಿಯ 1350 ಸದಸ್ಯರಿರುತ್ತಾರೆ. ಸದಸ್ಯರ ಒಟ್ಟು ಶೇರು ಬಂಡವಾಳ ರೂ. 40, 370-00 ಹಾಗೂ ರಾಜ್ಯ ಸರ್ಕಾರದ ಶೇರು ಬಂಡವಾಳ ರೂ. 4.95 ಲಕ್ಷ ಹೀಗೆ ಒಟ್ಟು ಶೇರು ಬಂಡವಾಳ ರೂ. 5, 35, 370-00 ಗಳಿರುತ್ತದೆ. ಈ ಸಂಘವು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿಗತ ರೂ. 5, 63, 218-00 ಹಾಗೂ ಅದರ ಮೇಲಿನ ಬಡ್ಡಿ ರೂ. 9, 81, 091-00ಗಳ ಬಾಕಿಯಿದ್ದು, ಪೂರ್ತಿ ಸಾಲ ಸುಸ್ತಿಯಾಗಿರುತ್ತದೆ. ಇದರ ಜೊತೆಗೆ ಸರ್ಕಾರಕ್ಕೆ ರೂ. 42, 000-00ಗಳ ಸಾಲ ತೀರಿಸಲು ಬಾಕಿ ಇರುತ್ತದೆ.

ಸದರಿ ಸಂಘದಲ್ಲಿ 1983-84 ರಿಂದ 1995-96ನೇ ಸಾಲಿನ ವರೆಗೆ ಸಂಘದ ನೌಕರರುಗಳು ಹಣ ದುರುಪಯೋಗ ಮಾಡಿದ ಪ್ರಕರಣಗಳು ಕಳಕಂಡಂತಿರುತ್ತದೆ.

ಕ್ರಮ. ಸಂಖ್ಯೆ	ನೌಕರರ ಹೆಸರು	ವರ್ಷ	ಮೊತ್ತ ರೂ	ಕ್ರಮ ಕೈಗೊಂಡ ಎವರ
1	2	3	4	5
1.	ಆಸ್ಕರ್, ಮಾಜಿ ನೌಕರ	1983-84	8855-05	ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ಕೈಗೊಂಡಿದೆ
2.	ಸಿ.ಎನ್. ರಾಮೇಗೌಡ, ಮಾಜಿ ನೌಕರ	1983-84	34521-00	-"-
3.	ಎಸ್. ಶ್ರೀನಿವಾಸ, ಮಾಜಿ ನೌಕರ	1983-84	45697-86	-"-
4.	ಟಿ.ಎನ್. ರಾಮಮೂರ್ತಿ,ಮಾಜಿಕಾರ್ಯದರ್ಶಿ	1991-92 ರಿಂದ 1993-94	202711-75	-"-
5.	ಕರೀಗೌಡ, ಮಾಜಿ ನೌಕರ	1992-93 ರಿಂದ 1995-96	118950-50	ಸಿವಿಲ್ ಮತ್ತು ಕ್ರಿಮಿನಲ್
6.	ಎಂ.ಎಸ್. ಕಾಳೇಗೌಡ, ಮಾಜಿ ನೌಕರ	1992-93 ರಿಂದ 1994-95	17134-00	-"- ಪೂರ್ಣ ಹಣ ವಸೂಲಾಗಿದೆ
7.	ಮಂಜೇಗೌಡ ಚತ್ತಾವೆ, ಮಾಜಿ ನೌಕರ	1993-94 ರಿಂದ 1994-95	7787-85	ಕ್ರಮ ಕೈಗೊಳ್ಳಲು ಬಾಕಿ ಇರುತ್ತದೆ
8.	ಕೆ.ಜಿ. ನಂಜರಾಜೇ ಅರಸ್, ಮಾಜಿಕಾರ್ಯದರ್ಶಿ	1995-96 ಮತ್ತು 1996-96	15409-01	ವಸೂಲಾಗಿದೆ ಮತ್ತು ಕ್ರಮ ಕೈಗೊಳ್ಳಲಾಗಿದೆ

ಮೇಲ್ಕಂಡಂತೆ ಸಂಘದಲ್ಲಿ ಹಣ ದುರುಪಯೋಗವಾಗಿದ್ದು, ಕ್ರಮ ಸಂಖ್ಯೆ 6ನ್ನು ಹೊರತುಪಡಿಸಿ, ಉಳಿದ ಎಲ್ಲಾ ಮಾಜಿ ನೌಕರರ ಮೇಲೂ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಈ ಪೈಕಿ ಕ್ರಮ ಸಂಖ್ಯೆ 4ರ ಟಿ.ಎನ್. ರಾಮಮೂರ್ತಿ ಎಂಬುವವರು ಇಲಾಖಾ ನೌಕರರಾಗಿದ್ದು, ಇವರಿಂದ ಬಾಕಿ ಇರುವ ಹಣ ವಸೂಲಾತಿಗಾಗಿ ಕ್ರಮ ಕೈಗೊಂಡು ಪ್ರತಿ ತಿಂಗಳು ರೂ. 2110-00 ರಂತೆ ಆಗಸ್ಟ್ 1999 ರಿಂದ ಪ್ರತಿ ಮಾಹೆ ಅವರ ವೇತನದಿಂದ ವಸೂಲಿಯಾಗುತ್ತಿದೆ. ಕ್ರಮ ಸಂಖ್ಯೆ 8ರ ಕೆ.ಜಿ. ನಂಜರಾಜೇ ಅರಸ್‌ರವರು ಇಲಾಖಾ ನೌಕರರಾಗಿದ್ದು, ನಿವೃತ್ತಿ ಹೊಂದಿ ನಂತರ ಪಾತಿಯಾಗಿರುತ್ತಾರೆ. ಇವರಿಂದ ಬರಬೇಕಾಗಿದ್ದ ಬಾಕಿ ಹಣ ರೂ. 15,409-01ಗಳು ಪೂರ್ಣ ವಸೂಲಿಯಾಗಿರುತ್ತದೆ. ಉಳಿದ ನೌಕರರು ಸಂಘದ ನೌಕರರಾಗಿದ್ದು, ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿದೆ. ಹಾಗೂ, ಕಾನೂನು ರೀತ್ಯ ಸಿವಿಲ್/ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗಿದೆ. (ಟಿ.ಎಸ್. ರಾಮಮೂರ್ತಿಯವರಿಂದ ವಸೂಲಿ ಆಗಬೇಕಾದ ಮೊತ್ತ ವಸೂಲಾತಿಗಾಗಿ ಸಹಕಾರ ಸಂಘಗಳ ನಿಬಂಧಕರು ಅವರ ನಿವೇತನದಲ್ಲಿ ಪ್ರತಿ ಮಾಹೆ ರೂ. 2110-00 ಕಟಾಯಿಸಲು ಆದೇಶಿಸಿರುತ್ತಾರೆ).

ಸಂಘದ ವ್ಯಾಪಾರ ವಹಿವಾಟು ದಿನದಿಂದ ದಿನಕ್ಕೆ ಕುಂಠಿತಗೊಂಡಿದ್ದು, ಗೊಬ್ಬರ ವ್ಯಾಪಾರ ಸಂಪೂರ್ಣ ಸ್ಥಗಿತಗೊಂಡಿದೆ. ಸಂಘದಲ್ಲಿ ಹಾಲಿ 250 ಪಡಿತರ ಕಾರ್ಡ್‌ಗಳಿಗೆ ಮಾತ್ರ ಸೀಮೇ ಎಣ್ಣೆ ವಿತರಣೆ ಮಾತ್ರ ನಿರ್ವಹಿಸಲಾಗುತ್ತಿದೆ.

ಸದರಿ ಸಂಘದ ಆಡಳಿತ ಮಂಡಳಿಯು ದಿನಾಂಕ 07-03-1998ರಿಂದ ನಡೆದ ಸಭೆಗೆ ಕೇವಲ ಇಬ್ಬರು ನಿರ್ದೇಶಕರು ಹಾಗೂ ಸಂಘದ ಕಾರ್ಯದರ್ಶಿ ಮತ್ತ ಹಾಜರಿದ್ದು, ಸಭೆಗೆ ಕೋರಂ ಇಲ್ಲದ ಪ್ರಯುಕ್ತ ಸಭೆಯನ್ನು ಮುಂದೂಡಿರುತ್ತದೆ. ಆನಂತರ ಈ ಬಗ್ಗೆ ಇಲಾಖೆಯಿಂದ ಪರಿಶೀಲನೆ ನಡೆಸಿ ಸಹಕಾರ ಸಂಘಗಳ ಕಾಯಿದೆ ಕಲಂ ಪ್ರಕಾರ ಸಂಘದ ಆಡಳಿತ ಮಂಡಳಿಯನ್ನು ರದ್ದುಪಡಿಸಿ, ಆಡಳಿತಾಧಿಕಾರಿಯಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಸನ ಇವರನ್ನು ಆದೇಶ ಸಂಖ್ಯೆ : ಜೆಆರ್‌ಎಂ/33/ಎಸ್‌ಎಸ್‌ಎಸ್/97-98, ದಿನಾಂಕ 29-09-98ರನ್ವಯ ನೇಮಿಸಲಾಗಿತ್ತು; ಅದರಂತೆ, ಆಡಳಿತಾಧಿಕಾರಿಯವರು ದಿನಾಂಕ08-01-98ರಂದು ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಆನಂತರ ಆಡಳಿತಾಧಿಕಾರಿಯವರು ಸಂಘದ 1997-98 ಮತ್ತು 1998-1999ನೇ ಸಾಲುಗಳ ಸರ್ವಸದಸ್ಯರುಗಳ ಸಭೆ ಮತ್ತು ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ಚುನಾವಣತ ನಡೆಸಲು ನಿಗದಿಪಡಿಸಿದ್ದು, ಅದರಂತೆ ಚುನಾವಣೆ ಪ್ರಕ್ರಿಯೇ ಪ್ರಾರಂಭವಾಗಿ ಚುನಾವಣೆ ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸಂಘದ ಬೈಲಾ ಪ್ರಕಾರ 'ಎ' ವರ್ಗದ ಕ್ಷೇತ್ರದಿಂದ ಕೃಷಿ ಪತ್ತಿನ ಸಹಕರ ಸಂಘಗಳ ಪರವಾಗಿ '7' ಸ್ಥಾನಗಳು ಹಾಗೂ 'ಬಿ' ವರ್ಗದ ಬಿಡಿ ಸದಸ್ಯರಿಂದ 2 ಜನ ಸದಸ್ಯರ ನಾಮಪತ್ರಗಳು ಹಾಗೂ 'ಬಿ' ವರ್ಗದ ಕ್ಷೇತ್ರಕ್ಕೆ 2 ಜನ ನಾಮ ಪತ್ರಗಳು ಒಟ್ಟು 4 ಜನರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಆದರೆ ಸಂಘದ ಹೊಸದಾಗಿ ರಚಿತವಾಗಿರುವ ಈ ಆಡಳಿತ ಮಂಡಳಿಗೆ ಚುನಾಯಿತ ಸದಸ್ಯರುಗಳು ಕನಿಷ್ಠ ಕೋರಂ ಆಗದ ಪ್ರಯುಕ್ತ ಆಡಳಿತ ಮಂಡಳಿಯನ್ನು ರಚಿಸಲು ಸಾಧ್ಯವಾಗಿರುವುದಿಲ್ಲ. ಕಾರಣ ಈ ತಾಲ್ಲೂಕಿನಲ್ಲಿ ಈ ಸಂಘಕ್ಕೆ ಸದಸ್ಯರಾಗಿರುವ ಕೃಷಿ ಪತ್ತಿನ ಸಹಕಾರ ಸಂಘಗಳು ಜಿಲ್ಲಾ ಸಹಕಾರ ಕೆಂದ್ರ ಬ್ಯಾಂಕ್, ಹಾಸನ, ಇವರಿಂದ ಪಡೆದ ಸಾಲವನ್ನು ಶೇ.75 ರಷ್ಟು ಪಾವತಿ ಮಾಡಿರುವ ಸಂಘಗಳಲ್ಲಿ ಕೇವಲ 2 ಸಂಘಗಳು ಮಾತ್ರ ಅರ್ಹತೆ ಹೊಂದಿದ್ದು, ಕಾರಣವಾಗಿರುತ್ತೆ. ಉಳಿದ ಸಹಕಾರ ಸಂಘಗಳಲ್ಲಿ ಚುನಾವಣೆಯಲ್ಲಿ ಭಾಗವಹಿಸಲು ಮುಂದುವರಿದಿರುತ್ತಾರೆ. ತದನಂತರ ದಿನಾಂಕ 31-03-2000ದ ಅಂತ್ಯಕ್ಕೆ ತಾಲ್ಲೂಕಿನಲ್ಲಿರುವ ವ್ಯವಸಾಯ ಸೇವಾ ಸಹಕಾರ ಸಂಘಗಳ ಪಟ್ಟಿಯನ್ನು ಡಿಸಿಸಿ ಬ್ಯಾಂಕ್ ಹಾಸನ ಇವರಿಂದ ಪಡೆದು ಪರಿಶೀಲಿಸಿದಾಗ ಈ ಸಂಘದ 'ಎ' ವರ್ಗದ ಸದಸ್ಯತ್ವ ಹೊಂದಿರುವ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಯಾವುದೇ ಸಂಘವು ಶೇ.75 ರಷ್ಟು ಸಾಲ ವಸೂಲಾತಿ ಮಾಡದೆ ಆಡಳಿತ ಮಂಡಳಿಗೆ ಆಯ್ಕೆಯಾಗಲು ಅನರ್ಹತೆ ಹೊಂದಿರುತ್ತಾರೆ.

ಈ ಮೇಲ್ಕಂಡ ವಿಷಯವನ್ನು ಪರಿಶೀಲಿಸಿ ಸಂಘದ ಆಡಳಿತ ಮಂಡಳಿಯನ್ನು ಸಹಕಾರ ಸಂಘಗಳ ಕಾಯ್ದೆ ಕಲಂ ಪ್ರಕಾರ ಒಂದು ವರ್ಷಕ್ಕಿಂತ ಹೆಚ್ಚುಕಾಲ ಮುಂದುವರಿಸಲು ಅವಕಾಶವಿಲ್ಲದ್ದರಿಂದ ಸಂಘವನ್ನು ಸಮಾಪನೆ ಮಾಡದೆ ಬೇರೆ ಮಾರ್ಗವಿಲ್ಲದ ಪ್ರಯುಕ್ತ ಸಂಘವನ್ನು ಸಹಕಾರ ಸಂಘಗಳ ಸಂಯುಕ್ತ ನಿಬಂಧಿರು, ಮೈಸೂರು ವಿಭಾಗ, ಮೈಸೂರು ರವರ ತಮ್ಮ ಆದೇಶ ಸಂಖ್ಯೆ: ಜೆಆರ್‌ಎಂ/ಎಡಿಎಂ/ಜಿ3/ 19/2000-01, ದಿನಾಂಕ 26-12-2000ರಂತೆ ಸಂಘವನ್ನು ಸಮಾಪನೆಗೊಳಿಸಿ ಆದೇಶ ನೀಡಿರುತ್ತಾರೆ. ಹಾಲಿ ಸಮಾಪನಾಧಿಕಾರಿಗಳಾಗಿ ಸಹಕಾರ

ಸಂಘಗಳ ಸಹಾಯಕ ನಿಬಂಧಕರು, ಹಾಸನ ಉಪ ವಿಭಾಗ, ಹಾಸನ ಇವರನ್ನು ನೇಮಿಸಲಾಗಿದೆ. ಅದರಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಸನರವರು ದಿನಾಂಕ : 22-01-2001ರಂದು ಸಮಾಪನಾಧಿಕಾರಿಯಾಗಿ ಪ್ರಭಾರವನ್ನು ಪಡೆದಿರುತ್ತಾರೆ. ಸಂಘವನ್ನು ಸಮಾಪನೆಗೊಳಿಸುವ ಮುನ್ನ ಸಂಘದ ಸದಸ್ಯರ ಹಾಗೂ ಸಾರ್ವಜನಿಕರ ಗಮನಕ್ಕೆ ಸಂಘವನ್ನು ಸಮಾಪನೆಗೊಳಿಸುವ ಮಾಹಿತಿಯನ್ನು ದಿನಪತ್ರಿಕೆ ಹಾಗೂ ಸರ್ಕಾರಿ ಕಛೇರಿಗಳಲ್ಲಿ ಪ್ರಕಟಗೊಳಿಸುವ ಮೂಲಕ ಸಾರ್ವಜನಿಕರ ಗಮನ ಸೆಳೆಯಲಾಗಿದ್ದು, ಸದಸ್ಯರು ಸಂಘವನ್ನು ನಡೆಸಿಕೊಂಡು ಹೋಗುವ ಬಗ್ಗೆ ಮುಂದೆ ಬಾರದ ಕಾರಣ ಸಂಘವನ್ನು ಸಮಾಪನಗೊಳಿಸಲಾಗಿದೆ.

+ಶ್ರೀ ಕೆ.ಹೆಚ್. ಹನುಮೇಗೌಡ : ಸನ್ಮಾನ್ಯ ಅಧ್ಯಕ್ಷರೆ, 1945ರಲ್ಲಿ ಈ ಸಂಘ ಪ್ರಾರಂಭವಾಯಿತು. ಇಡೀ ತಾಲ್ಲೂಕಿಗತ ಗೊಬ್ಬರ, ಕೃಷಿ ಸಲಕರಣೆಗಳು, ಔಷಧಿ ಸೇರಿದಂತೆ ರೈತರಿಗೆ ಬೇಕಾದ ಎಲ್ಲಾ ಸಾಬೂನುಗಳನ್ನು ಆ ಸಂಘ ಒದಗಿಸುತ್ತಿತ್ತು, ಚೆನ್ನಾಗಿ ನಡೆದುಕೊಂಡು ಬಂತು. 1985-85ರ ನಂತರ ಗ್ರಹಚಾರ ಪ್ರರಂಭವಾಯಿತು. ಮಾನ್ಯ ಸಚಿವರಿಗತ ನಾನೊಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ, ಆ ಸಂಘ ಲಾಭದಲ್ಲಿಯು ಇತ್ತು, ಸಾಕಷ್ಟು ಹಣವು ಶೇಖರಣೆಯನ್ನು ನೌಕರರ ವರ್ಗದವರು ಇದ್ದರು, ಬೋರ್ಡ್ ಕೂಡ ಇತ್ತು. ಆ ಬೋರ್ಡ್‌ನಲ್ಲಿ ನಿಮ್ಮ ಇಲಾಖೆಯ ಸಹಾಯಕ ನಿರ್ದೆಶಕರೊಬ್ಬರು ಸದಸ್ಯರಾಗಿದ್ದರು, ಇವರೆಲ್ಲಾ ಸುಮಾರು 8- 10 ಲಕ್ಷ ರೂಪಾಯಿಗಳನ್ನು ದರೋಡೆ ಮಾಡಿಕೊಂಡು ಹೋಗುವಾಗ ನಿಮ್ಮ ಇಲಾಖೆ ಏನು ಮಾಡುತ್ತಿತ್ತು? ಮೇಲ್ಪಟ್ಟ ಅಧಿಕಾರಿಗಳು ಇರಲಿಲ್ಲವೆ? ಡೆಪ್ಯೂಟಿ ರಿಜಿಸ್ಟ್ರಾರ್ ಹೀಗೆ ಬೇಕಾದಷ್ಟು ಅಧಿಕಾರಿಗಳಿದ್ದಾಗ್ಯೂ ಏನು ಮಾಡುತ್ತಿದ್ದರು? ಒಬ್ಬ ಕಾರ್ಯದರ್ಶಿ ನಾಲ್ಕು ಲಕ್ಷ ರೂಪಾಯಿಗಳನ್ನು ದರೋಡೆ ಮಾಡಿಕೊಂಡು ಹೋಗಿದ್ದಾರೆ, ಈಗ ಅವರಿಂದ 2110 ರೂಪಾಯಿಗಳನ್ನು ರಿಕವರಿ ಮಾಡುತ್ತಿದ್ದೇವೆಂದು ಉತ್ತರದಲ್ಲಿ ಹೇಳುತ್ತಿದ್ದೀರಿ. ರೈತರ ಬಡ್ಡಿಯನ್ನು ಮನ್ನಾ ಮಾಡಿ, ರೈತರು ಬಹಳ ತೊಂದರೆಯಲ್ಲಿದ್ದಾರೆ ಎಂದು ನಾಲ್ಕು ದಿವಸಗಳಿಂದ ಈ ಶಾಸನ ಸಭೆಯಲ್ಲಿ ಕೇಳುತ್ತಿದ್ದರೂ, ಅದು ಸಾಧ್ಯವಿಲ್ಲ ಎಂದು ನೀವು ಹೇಳಿದಿರಿ. ಆದರೆ ಇಲ್ಲಿ, ಸರ್ಕಾರದ್ದೂ ಸ್ವಲ್ಪ ದುಡ್ಡು ಇರಬಹುದು, ರೈತರ ದುಡ್ಡನ್ನು ದರೋಡೆ ಮಾಡಿಕೊಂಡು ಹೋಗಿರುವವರಿಗೆ ನೀವು ಉದಾರತೆಯಿಂದ, ಹಣ ಕಟ್ಟಿಕೊಂಡು ಹೋಗಿ ಎಂದು ಹೇಳಿದ್ದೀರಿ. ಹೊಟ್ಟೆಗೆ ಇಲ್ಲದವನು ಬಸ್ ಸ್ಟ್ಯಾಂಡಿನಲ್ಲಿ 20 ರೂಪಾಯಿ ಪಿಕ್-ಪಾಕೆಟ್ ಮಾಡಿದರೆ ಅವನಿಗೆ 4-5 ವರ್ಷ ಸಜೆ ಆಗುತ್ತದೆ. ಆದರೆ ಇಲ್ಲಿ ವಿದ್ಯಾವಂತರು, ಬುದ್ಧಿವಂತರು, ಓದಿದವರು, ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳುವವರು ಲಕ್ಷಾಂತರ ರೂಪಾಯಿಯನ್ನು ದರೋಡೆ ಮಾಡಿಕೊಂಡು ಹೋಗಿದ್ದು, ಅವರಿಗೆ ನೀವು ಕನಿಕರದಿಂದ, ದಯಮಾಡಿ ಕೊಡಿ, ದಯವಿಟ್ಟು ಕೊಡಿ ಎಂದು ಕೇಳುತ್ತಿದ್ದೀರಿ. ನಾಲ್ಕು ಲಕ್ಷ ರೂಪಾಯಿ ರೈತರ ದುಡ್ಡನ್ನು ಹೊಡೆದುಕೊಂಡು ಹೋಗಿರುವ ಕಾರ್ಯದರ್ಶಿಯವರಿಗೆ ಪ್ರಮೋಷನ್ ಕೊಟ್ಟು ಸಿ.ಇ.ಓ (ಕೋ -ಆಪರೇಟೀವ್ ಎಕ್ಸ್‌ಟೆನ್‌ಷನ್) ಎಂದು ಮಾಡಿದ್ದೀರಿ. ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ, ''ತೋಳವನ್ನು ಕುರಿ ಕಾಯಲು ಹಾಕಿದರು'' ಎಂದು. ಆ ರೀತಿ ನೀವು ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಿ. ಅವರಿಂದ ಈ ರಾಜ್ಯದ ರೈತರಿಗೆ ಯಾವ ಉತ್ತಮವಾದ ಕೆಲಸ ಆಗುತ್ತದೆ ಎನ್ನುವುದನ್ನು ನೀವು ದಯಮಾಡಿ ಹೇಳಬೇಕು. ಇವನ್ನೆಲ್ಲಾ ನೋಡಿದಾಗ ಬಹಳ ಸಂಕಟವಾಗುತ್ತದೆ. ಕಳೆದ ಹತ್ತಾರು

ವರ್ಷಗಳಿಂದ ಅಷ್ಟೊಂದು ಅಭಿವೃದ್ಧಿಯಲ್ಲಿದ್ದಂಥ ತಾಲ್ಲೂಕು ಕೋ-ಆಪರೇಟಿವ್ ಸೊಸೈಟಿ ಈಗ ಸರ್ವನಾಶವಾಗಿದೆ. ಎಲ್ಲರೂ ದುಡ್ಡು ಹೊಡೆದುಕೊಂಡು ಹೋಗಿ ಈಗ ಅದು ಮುಚ್ಚುವ ಸ್ಥಿತಿ ಬಂದಿದೆ. ಇದರಿಂದ ತೊಂದರೆಯಾಗಿದ್ದು, ಆ ತಾಲ್ಲೂಕಿನ ರೈತರಿಗೆ. ತಸ್ಮೊಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಆ ಸಂಘದ ಸೊಗಸಾದ ಒಳ್ಳೆಯ ಕಲ್ಲಿನ ಕಟ್ಟಡವನ್ನು ಕೂಡ ಯಾರೋ ಶ್ರೀಮಂತರಿಗೆ ಮಾರಲು ವ್ಯವಸ್ಥೆಯಾಗುತ್ತಿದೆ ಎನ್ನುವುದನ್ನು ಕೇಳಿದ್ದೇನೆ. ಇದು ನಿಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಇಂಥ ಹೀನಾಯ ಸ್ಥಿತಿ ಬಂದಿದೆ. ನನ್ನ ಒಂದು ಪ್ರಶ್ನೆ ಎಂದರೆ, ನಿಮ್ಮ ಇಲಾಖೆಯವರು ಏನು ಮಾಡುತ್ತಿದ್ದರು? ಸರ್ಕಾರವಿದೆ, ಮಂತ್ರಿಗಳಿದ್ದೀರಿ, ರಿಜಿಸ್ಟ್ರಾರ್ ಇದ್ದಾರೆ, ಎಲ್ಲರೂ ಏನು ಮಾಡುತ್ತಿದ್ದರು? ಈ ದೇಶದಲ್ಲಿ ರೈತರ ಮೋಕ್ಷ ಆಗುವುದಾದರೆ, ಅದು ಸಹಕಾರ ಇಲಾಖೆಯಿಂದ ಆಗುತ್ತದೆ ಎಂದು ನೀವು ಎಲ್ಲ ಕಡೆ ಹೇಳಿಕೊಂಡು ಬರುತ್ತೀರಲ್ಲ, ಆ ರೈತರಿಗೆ ನೀವು ಮಾಡಿದ ಮೋಕ್ಷ ಇದೇ ಏನು? ಅವರು ಏನು ಪಾಪ ಮಾಡಿದ್ದರು? ಅಲ್ಲಿ ಏನು? ಅವರು ಏನು ಪಾಪ ಮಾಡಿದ್ದರು? ಅಲ್ಲಿ ಸಿಗತಕ್ಕಂಥ ಗೊಬ್ಬರ ಉಪಕರಣ ಎಲ್ಲವೂ ಈಗ ಬೇರೆಯವರ ಕೈಗೆ ಹೋಗಿ ಅವರು ನಿಕ್ಕಾಪಟ್ಟೆ ಚಾರ್ಜ್ ಮಾಡುತ್ತಿದ್ದಾರೆ. ಸರ್ಕಾರ ದುಡ್ಡು ಹಾಕಿ, ರೈತರು ಷೇರು ಹಾಕಿ ಮಾಡಿದ ಈ ಸೊಸೈಟಿ ಹೋಯಿತು ಎಂದರೆ ಇದಕ್ಕೆ ಕಾರಣವೇನು? ನಾಲ್ಕಾರು ವರ್ಷಗಳಿಂದ ಮೋಸ ಮಾಡಿ ಅವರವರ ಇಚ್ಛೆಯಂತೆ ದುಡ್ಡು ಹೊಡೆದುಕೊಂಡು ಹೋಗುವವರೆಗೆ ನಿಮ್ಮವರು ಏನು ಮಾಡುತ್ತಿದ್ದರು? ಅವರು ಪೂರಾ ತಿಂದು ಹೋಗುವವರೆಗೆ ನಿಮ್ಮವರು ಏನು ಮಾಡುತ್ತಿದ್ದರು? ಎನ್ನುವುದಕ್ಕೆ ನೀವು ವಿವರಣೆ ಕೊಡಬೇಕು. ಅಷ್ಟೊಂದು ಉಚ್ಚಾಯ ಸ್ಥಿತಿಯಲ್ಲಿದ್ದಂಥ ಒಂದು ಸಹಕಾರ ಸಂಘವನ್ನು ನುಂಗಿ ನೀರು ಕುಡಿದು ಹೋಗಿದ್ದಾರೆ. ರೈತರ ಬಡ್ಡಿ ಮನ್ನಾ ಮಾಡಿ ಎಂದು ಕೇಳಿದಾಗ ನೀವು ನಿರ್ದಾಕ್ಷಿಣ್ಯವಾಗಿ ಆಗುವುದಿಲ್ಲ ಎಂದು ಹೇಳಿದಿರಿ. ಆದರೆ ಇಲ್ಲಿ ನಾಲ್ಕಾರು ಲಕ್ಷ ರೂಪಾಯಿಗಳನ್ನು ಹೊಡೆದುಕೊಂಡು ಹೋಗಿರುವವರಿಗೆ ಬಡ್ಡಿಯೂ ಇಲ್ಲ ಏನೂ ಇಲ್ಲ. ದುಡ್ಡು ಹೊಡೆದಿರುವವರು ಅವಿದ್ಯಾವಂತರೇ, ದನ ಕಾಯುವವರೇ ಅಥವಾ ಕುರಿ ಕಾಯುವವರೆ? ವಿದ್ಯಾವಂತರಾಗಿದ್ದು, ಸರ್ಕಾರದಿಂದ ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿರತಕ್ಕಂಥ ಅಧಿಕಾರಿಗಳು ರೈತರಿಗೆ ಇಂಥ ದ್ರೋಹ ಮಾಡಿದ್ದಾರೆ ಎಂದರೆ ನೀವು ಏಕೆ ಇರಬೇಕು? ಮಂತ್ರಿ ಏಕೆ ಇರಬೇಕು, ಸರ್ಕಾರ ಏಕೆ ಇರಬೇಕು? ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಆ ನಿರ್ಭಾಗ್ಯ ರೈತರಿಗೆ ನಿಮ್ಮಿಂದ ಏನೂ ಪ್ರಯೋಜನವಿಲ್ಲ. ನೀವು ಇರುವ ಅವಶ್ಯಕತೆ ಇಲ್ಲ. ರೈತರು ಕೊಡಬೇಕಾದ ಸಾಲಕ್ಕೆ ಬಡ್ಡಿ, ಚಕ್ರಬಡ್ಡಿಗಳನ್ನು ಹಾಕಿ, ಅವರ ಮನೆಯಲ್ಲಿ ದನಕರುಗಳೇನಾದರೂ ಇದ್ದರೆ ಅವನ್ನು ಹಿಡಿದುಕೊಂಡು ಹೋಗುತ್ತೀರಿ. ಇಲ್ಲದಿದ್ದರೆ ಹೆಂಗಸರ ತಾಳಿಗೆ ಕೈ ಹಾಕುತ್ತೀರಿ. ಇಲ್ಲಿ ಇಷ್ಟೊಂದು ದುಡ್ಡು ಹೊಡೆದಿರುವವರಿಗೆ ನೀವು ಏಕೆ ಬಡ್ಡಿ ಹಾಕಿಲ್ಲ? ಈ ದೇಶದಲ್ಲಿ ಇಂಥ ಎಷ್ಟು ಸಹಕಾರ ಸಂಘಗಳನ್ನು ನುಂಗಿ ನೀರು ಕುಡಿದಿದ್ದಾರೆ? ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ನೀವು ದಯವಿಟ್ಟು ಹೇಳಬೇಕು. ಈ ದೇಶದಲ್ಲಿ ಮುಂದೆ ಕ್ರಾಂತಿಯಾದರೆ, ಈಗಿರತಕ್ಕಂಥ ಸಹಕಾರಿ ವ್ಯವಸ್ಥೆ ಮುಂದುವರೆದರೆ ಇದೇ ಮೂಲಭೂತ ಕಾರಣವಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈ ರೈತರ ಶಾಪಕ್ಕೆ ಸಂಬಂಧಪಟ್ಟವರೆಲ್ಲರೂ ಬಲಿಯಾಗುತ್ತಾರೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಪಡುತ್ತೇನೆ. ನಾಲ್ಕು ಲಕ್ಷ ಹೊಡೆದುಕೊಂಡು

ಹೋದಂಥವನಿಗೆ, ನೀನು ನಿಧಾನವಾಗಿ ಕಟ್ಟಿಕೊಳ್ಳಪ್ಪಾ ಎಂದು ಉದಾರತೆಯನ್ನು ತೋರಿಸಿದ್ದೀರಲ್ಲ, ಅವನ ಮೇಲೆ ನಿಮಗೆ ಅಷ್ಟೊಂದು ಕನಿಕರ ಬಂದಿರುವುದು ಏಕೆ ಸ್ವಾಮಿ? ಮಳೆ ಬರಲಿ, ಬಾರದೆ ಇರಲಿ, ಹೊಟ್ಟೆಗೆ ಇಲ್ಲದೆ ತಾನು ಉಪವಾಸ ಇದ್ದಾದರೂ ಈ ದೇಶಕ್ಕೆ ಅನ್ನವನ್ನು ದುಡಿದು ಹಾಕುತ್ತಾನಲ್ಲ, ಅವನ ಬಗ್ಗೆ ನಿಮಗೆ ಕನಿಕರವಿಲ್ಲ. ನಾಲ್ಕು ಲಕ್ಷ ದುಡ್ಡು ಹೊಡೆದುಕೊಂಡು ಹೊಗುವವನ ಬಗ್ಗೆ ಅಪಾರವಾದ ಕರುಣೆ ಉಕ್ಕಿ ಹರಿಯುತ್ತಿದೆಯಲ್ಲ, ಇದು ಏಕೆ?

ಶ್ರೀ ಡಿ.ಕೆ. ಶಿವಕುಮಾರ್ : ನಿಮ್ಮ ನೋವು, ದುಃಖ, ದುಮ್ಮಾನವೆಲ್ಲವೂ ನನಗೆ ಅರ್ಥವಾಗುತ್ತದೆ. ಆದರೆ ನಿಮ್ಮ ಪಕ್ಕದಲ್ಲಿರುವ ಸದಾನಂದಗೌಡರಿಗೂ, ಸುರೇಶ್ ಕುಮಾರ್‌ರವರಿಗೂ ಅರ್ಥವಾಗುವುದಿಲ್ಲವಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ದಯವಿಟ್ಟು ಆ ಮಾತನ್ನು ಹಿಂದಕ್ಕೆ ತೆಗೆದು ಕೊಳ್ಳಬೇಕು. ರೈತರ ಬಗ್ಗೆ ಇವರಿಗೆ ಎಷ್ಟು ಕನಿಕರ ಇದೆ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಹನುಮೇಗೌಡರು ಹೇಳುವುದನ್ನು ನೋಡಿ ಅವರಿಗೆ ಮನಸ್ಸು ಕರಗಿರಬೇಕು. ಈ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ನೂರಾರು ಜನ ರೈತರ ಬಗ್ಗೆ ನಿಮಗೆ ಕನಿಕರ ಬಂತೇ? ಇಲ್ಲಿ ಕುಳಿತುಕೊಂಡು ಅವರು ಅಷ್ಟು ಹೇಳುತ್ತಿದ್ದಾರೆ, ನಮ್ಮ ಮನಸ್ಸು ಕರಗುತ್ತಿದೆ. ಆದರೆ ತಾವು ವಿಷಯಗಳನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದ್ದೀರಿ. ತಾವು ಸ್ವಲ್ಪ ಗಂಭೀರವಾಗಿ ತೆಗೆದುಕೊಳ್ಳಿ. ಏಕೆಂದರೆ, ಇದು ಸಣ್ಣ ಸಂಗತಿಯಲ್ಲ. ಇದು ಒಂದೇ ಕೋ-ಆಪರೇಟೀವ್ ಸೊಸೈಟಿಯಲ್ಲ, ಇವತ್ತು ರಾಜ್ಯದಲ್ಲಿ ಬೇರೆಬೇರೆ ಸೊಸೈಟಿಗಳನ್ನು ಈ ರೀತಿ ಸುಂಗಿ ನೀರು ಕುಡಿದರೆ, ಇದು ಮಾದರಿಯಾಗುವಂತೆ ತಾವು ಸ್ವಲ್ಪ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ವಿನಂತಿ ಅವರದು.

ಶ್ರೀ ಡಿ.ಕೆ. ಶಿವಕುಮಾರ್ : 1983ರಿಂದ 1996-97ರವರೆಗೆ ನಡೆದಂಥ ವಿಚಾರ ಬೆಳಕಿಗೆ ಬಂದಿದೆ. ನಮ್ಮ ಅಧಿಕಾರಿಗಳು ಆಡಿಟ್, ಎನ್‌ಕ್ವೈರಿ, ಮತ್ತೊಂದು ಎಲ್ಲವನ್ನೂ ಮಾಡಿ ಎಷ್ಟು ಹಣ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ. ಇಲ್ಲಿ ಮ್ಯಾನೇಜ್‌ಮೆಂಟ್ ಅನ್ನು ರೆಸ್ಟೋರ್ ಮಾಡಬೇಕು ಎನ್ನುವ ಒಂದು ಪ್ರಯತ್ನವನ್ನು ನಾವು ಮಾಡಿದ್ದೇವೆ. ಆದರೆ ಕೋರಂ ಬಂದಿಲ್ಲ. ಈಗಲೂ ಸಹ ಅಲ್ಲಿಯ ಸ್ಥಳೀಯ ಶಾಸಕರು ಇದರ ಬಗ್ಗೆ ಚಿಂತನೆ ಮಾಡಿ ಮತ್ತೆ ಆ ಸೊಸೈಟಿಗೆ ಶಕ್ತಿ ಬರುವ ಹಾಗೆ ಮಾಡಿದರೆ ಸಮಾಪನಗೊಳಿಸಿರುವ ಇದನ್ನು ಖಂಡಿತವಾಗಿ ಮತ್ತೆ ರಿವೈವ್ ಮಾಡಲು ಒಂದು ಅವಕಾಶವಿದೆ. ಆ ಒಂದು ಅಪೆಷನ್ ಅನ್ನು ಈಗ ಕೊಡಲು ನಾವು ತಯಾರಿದ್ದೇವೆ. ಎರಡನೆಯದಾಗಿ, ಈ ಸೊಸೈಟಿಯ ಕಟ್ಟಡವನ್ನು ಮಾರಾಟ ಮಾಡಲು ಹೊರಟಿದ್ದಾರೆ ಎಂದು ಪ್ರಸ್ತಾಪ ಮಾಡಿದರು. ಸಹಕಾರ ಸಂಘದ ಆಸ್ತಿಯನ್ನು ಮಾರಲು ಅಷ್ಟು ಸಲೀಸಾಗಿ ಖಂಡಿತವಾಗಿಯೂ ಅವಕಾಶ ಕೊಡುವುದಿಲ್ಲ. ಅದು ನನಗೇ ಬರಬೇಕಾಗುತ್ತದೆ. ಈ ಬಗ್ಗೆ ನಾನು ತಮಗೆ ಅಧ್ಯಕ್ಷರ ಮುಖಾಂತರ ಭರವಸೆ ಕೊಡಲು ಬಯಸುತ್ತೇನೆ. ಈ ರೀತಿಯ ಪ್ರಕರಣಗಳು ರಾಜ್ಯದಲ್ಲಿ ಎಷ್ಟಿವೆ ಎನ್ನುವ ವಿಚಾರವನ್ನು ಕೇಳಿದರು. ಇಂಥ ಪ್ರಕರಣಗಳು ಬೇಕಾದಷ್ಟು ಇವೆ. ಆದರೆ ಸಧ್ಯಕ್ಕೆ ನನ್ನ ಹತ್ತಿರ ಆ ಮಾಹಿತಿ ಇಲ್ಲ. ಅದನ್ನು ನಾನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಏಕೆ ಸದಾನಂದಗೌಡರ ಹೆಸರನ್ನು ಪ್ರಸ್ತಾಪ ಮಾಡಿದೆ ಎಂದರೆ,

ಹೀಗೆ ದುರುಪಯೋಗ ಮಾಡಿಕೊಳ್ಳುವಂಥ ಅಧಿಕಾರಿಗಳು ಮತ್ತು ಸದಸ್ಯರುಗಳಂಥ ಕಳ್ಳರನ್ನು ಮಟ್ಟ ಹಾಕಬೇಕು ಎಂದು ನಾನು ಒಂದು ಬಿಲ್ ಅನ್ನು ಮೂವ್ ಮಾಡುವ ಪ್ರಯತ್ನಕ್ಕೆ ವಿರುದ್ದವಾಗಿ ತಮ್ಮ ಕೂಗು ಆಕಾಶಕ್ಕೆ ಮುಟ್ಟಿತ್ತಲ್ಲ. ಅದಕ್ಕಾಗಿ ತಮಗೆ ಕನಿಕರ ಬರಲಿ ಎಂದು ಹೇಳಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಆ ಬಿಲ್ ಹೆಸರಿನಲ್ಲಿ ನೀವು ಏನೇನು ಅನಾಹುತ ಮಾಡಬೇಕು ಇಂದು ಇದ್ದಿರಿ ಎನ್ನುವುದು ಕೂಡ ನಮಗೆ ಗೊತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ತಾವು ತಂದಿರುವ ಬಿಲ್ ಮುಖಾಂತರ ಅಧಿಕಾರಿಗಳ ಕೈಗೆ ಅಧಿಕಾರ ಕೊಡಲು ಹೊರಟಿದ್ದೀರಿ. ಈಗ ಯಾರೋ ಒಬ್ಬರು ನಾಲ್ಕು ಲಕ್ಷ ಹೊಡೆದಿದ್ದಾರೆ ಎಂದು ಅವರು ಹೇಳುತ್ತಿದ್ದಾರಲ್ಲ, ಆ ರೀತಿ ಆಗುತ್ತದೆ. ಆ ಕಾರಣದಿಂದ ಅದು ಬೇಡ ಎಂದು ಹೇಳಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ : ರಾಮೂರ್ತಿಯ ಬಗ್ಗೆ ಹೇಳಿ. ಇವರಿಂದ ತಿಂಗಳಿಗೆ ಎರಡು ಸಾವಿರ ಮಾತ್ರ ವಸೂಲು ಮಾಡಿಕೊಂಡು, ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಲ್ಲ, ಅದು ಏಕೆ ಎನ್ನುವುದನ್ನು ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್ : ಅವರಿಂದ ತಿಂಗಳಿಗತ ಎರಡು ಸಾವಿರ ರೂಪಾಯಿ ವಸೂಲು ಮಾಡಬೇಕು ಎಂದು ಫಿಕ್ಸ್ ಮಾಡಿದ್ದಾರೆ. ಅದನ್ನು ನಾನು ರೀ-ಎಕ್ಸ್‌ಮಿನ್ ಮಾಡುತ್ತೇನೆ. ಅವರಿಗೆ ಪ್ರಮೋಷನ್ ಆಗಿದೆಯೇ ಏನು ಎನ್ನುವುದನ್ನು ನಾನು ನೋಡುತ್ತೇನೆ. ಅವರು ಬೆಳಕಿಗೆ ತಂದಿದ್ದಾರೆ. ಯಾರನ್ನೋ ತಪ್ಪಿಸುವಂಥಾದ್ದು, ಯಾಗಿಗೋ ರಕ್ಷಣತ ಕೊಡುವಂಥಾದ್ದು, ನಮ್ಮ ಸರ್ಕಾರದಲ್ಲಿ ಇಲ್ಲವೇ ಇಲ್ಲ. ಬಹಳ ಬೇಗ ಚುರುಕಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಸಹ ಹಾಕಿದ್ದೇವೆ. ನಾವು ಏನಾದರೂ ಕ್ರಮ ತೆಗೆದುಕೊಳ್ಳಬೇಕು ಎಂದರೆಂ ಕೋ-ಆಪರೇಷನ್ ಮೂವ್‌ಮೆಂಟ್‌ನಲ್ಲಿ ಅನುಸರಿಸಬೇಕಾದ ಪದ್ಧತಿ ಯಾವ ರೀತಿ ಇದೆ ಎಂದರೆ, ಅದು ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್ ಹೀಗೆ ಹಂತಹಂತಕ್ಕೆ ಹೋಗಿ, ಕೊನೆಗೆ ಅದು ಮಂತ್ರಿಗಳಿಗೆ ಬಂದು ಕೋರ್ಟಿಗೆ ಹಾಕುವಷ್ಟರಲ್ಲಿ ಬಹುಶಃ 30 ವರ್ಷಗಳಾಗುತ್ತದೆ. ಅವರಿಗೆ ಅಷ್ಟು ಅವಕಾಶವಿದೆ. ಇದನ್ನು ಏನಾದರೂ ಮಾಡಿ ಕಡಿಮೆ ಮಾಡಬೇಕು ಎಂದು ನಾನು ಇದರ ಬಗ್ಗೆಯೂ ಸಮಗ್ರವಾಗಿ ಚಿಂತನೆ ಮಾಡುತ್ತಿದ್ದೇನೆ. ಇದಕ್ಕೆ ತಮ್ಮೆಲ್ಲರ ಸಹಕಾರವನ್ನು ಅಪೇಕ್ಷಿಸುತ್ತಿದ್ದೇನೆ. ಅದಷ್ಟು ಬೇಗ, ಇನ್ನೂ ಚುರುಕಾಗಿ ಹೇಗೆ ಮಾಡಲು ಸಾಧ್ಯ ಎನ್ನುವ ಬಗ್ಗೆ ಗೌರವಾನ್ವಿತ ಸದಸ್ಯರುಗಳ ಆಶಯದಂತೆ ಕೆಲಸ ನಿರ್ವಹಿಸಲು ನಾನು ತಯಾರಿದ್ದೇನೆ.

1.40 ಪಿ.ಎಂ

(ಈ ಹಂತದಲ್ಲಿ ಉಪಾಧ್ಯಕ್ಷರಾದ ಶ್ರೀ ಮನೋಹರ ತಹಶೀಲ್ದಾರ್ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಕೆ. ಹೆಚ್. ಹನುಮೇಗೌಡ : ಈಗ ಏನೋ ಬಹಳ ಸ್ಟ್ರಿಕ್ಟ್ ಆಗಿ ಆಕ್ಷನ್ ತೆಗೆದುಕೊಳ್ಳುವ ಹಾಗೆ ಹೇಳಿದ್ದೀರಿ ನಿಜವಾಗಿ ಆಕ್ಷನ್ ತೆಗೆದುಕೊಳ್ಳುತ್ತೀರಾ? ಏಕೆಂದರೆ ಕೋ-ಆಪರೇಟೀವ್ ಸೊಸೈಟಿಗೆ ತಿಂಗಳಿಗೆ ಹನ್ನೆರಡೂವರೆ ಸಾವಿರ ರೂಪಾಯಿಗಳ ಬಾಡಿಗೆ ಬರುವ ವ್ಯವಸ್ಥೆ ಇದ್ದು ಬಾಡಿಗೆ ಬರುತ್ತಿತ್ತು. ಆ ಬಾಡಿಗೆಯನ್ನು ಕೂಡ ವಸೂಲಿ ಮಾಡಿಲ್ಲ. ರೈತರಿಗೆ ಗೊಬ್ಬರ ಕೊಡುವ ವ್ಯವಸ್ಥೆ ಇತ್ತು ಅದು ನಿಂತುಹೋಯಿತು. ಸುಮಾರು 200 ರಿಂದ 300 ಕಾರ್ಡುದಾರರು ಇದ್ದು ಅವರಿಗೆ ಸೀಮೆಎಣ್ಣೆ ವಿತರಣೆ ಮಾಡುವ ವ್ಯವಸ್ಥೆ ಇದ್ದದ್ದು ನಿಂತುಹೋಗಿದೆ. ಕನ್ಸೂಮರ್ ಸೆಕ್ಷನ್ ಇತ್ತು ಅದು ಸಹ ನಿಂತುಹೋಯಿತು. ಹೀಗೆ ಎಲ್ಲವೂ ನಿಂತುಹೋದರೂ ಕೂಡ ಸಂಬಳಸಾರಿಗೆಯನ್ನು ಅದೇ ರೀತಿ ಕೊಟ್ಟುಕೊಂಡು ಬಂದಿದ್ದಾರೆ. ಏಕೆ ಹೀಗಾಯಿತು? ಸುಮಾರು ಎರಡೂವರೆ ಲಕ್ಷ ರೂಪಾಯಿಗಳನ್ನು ಬಾಡಿಗೆ ಬಾಕಿ ನಿಂತಿದೆ. ಆಗಾಗ್ಗೆ ಸೊಸೈಟಿಯ ಲೆಕ್ಕಪತ್ರಗಳನ್ನು ಚೆಕ್ ಮಾಡುವ ವ್ಯವಸ್ಥೆ ಇದ್ದಿದ್ದರೆ ಈ ರೀತಿ ಅನ್ಯಾಯ ಆಗದ ಹಾಗೆ ತಡೆದಿದ್ದರೆ ಆ ಸೊಸೈಟಿಯನ್ನು ಉಳಿಸಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ? ಕರ್ತವ್ಯಲೋಪವನ್ನು ಎಲ್ಲಾ ಅಧಿಕಾರಿಗಳು ಮಾಡಿದ್ದಾರೆ. ನಾಲ್ಕು ಲಕ್ಷ ರೂಪಾಯಿಗಳ ಅವ್ಯವಹಾರ ಮಾಡಿದಂಥ ಸೆಕ್ರೆಟರಿಗೆ ಬಡ್ತಿ ಕೊಟ್ಟು ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಗೆ ಅಥವಾ ಆರ್ಗನೈಜೇಷನ್‌ಗತ ಹಾಕಿದ್ದೀರಲ್ಲವೇ? ಅವನ್ನು ನಿಮ್ಮ ಬೆಂಗಳೂರಿನ ಕಚೇರಿಗೆ ತೆಗೆದುಕೊಳ್ಳುತ್ತೀರಾ? ನಿಮ್ಮ ಕಚೇರಿಗೆ ಅಥವಾ ರಿಜಿಸ್ಟ್ರಾರ್‌ರವರ ಕಚೇರಿಗಾದರೂ ತೆಗೆದುಕೊಳ್ಳಿ. ಏಕೆಂದರೆ ಹಣ ಹೊಡೆಯುವುದಕ್ಕೆ, ನುಂಗುವುದಕ್ಕೆ, ನಂತರ ಬಚಾವಾಗುವುದಕ್ಕೆ ಬಹಳ ಎಕ್ಸ್‌ಪರ್ಟ್ ಆಗಿದ್ದಾನೆ. ಇಷ್ಟು ಸಲ ಅವನು ಹೇಗೆ ಬಚಾವಾಗಿದ್ದಾನೆ ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಯಾವ ಆಫೀಸ್‌ಗೆ ಅವನನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ನನಗೆ ಅರ್ಥವಾಗಿದೆ. ಇದರ ಬಗ್ಗೆ ಸಪರೇಟ್ ಆಗಿ ಮಾಹಿತಿಯನ್ನು ತರಿಸಿ ಯಾವ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೋ ಆ ರೀತಿ ಖಂಡಿತವಾಗಿ ಮಾಡುತ್ತೇನೆ. ನಮ್ಮ ಅಧಿಕಾರಿಗಳು ಈ ವಿಚಾರದ ಪ್ರತಿಯೊಂದು ಹಂತದಲ್ಲೂ ಆ ಸೊಸೈಟಿಯನ್ನು ಯಾವ ರೀತಿ ರಿವೈವ್ ಮಾಡುವುದಕ್ಕೆ ಸಾಧ್ಯವಿದೆಯೋ ಮತ್ತು ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ನಾವು ಖಂಡಿತವಾಗಿ ಮಾಡುತ್ತೇನೆ.

(ಆ) ಮೂಡಬಿದ್ರೆ ಹೋಬಳಿಯ ನೊಂದಣಿ ಶುಲ್ಕ, ಮಂಗಳೂರು ತಾಲ್ಲೂಕಿಗೆ ಪಾವತಿಯಾಗದೆ, ಕಾರ್ಕಳ ತಾಲ್ಲೂಕಿಗೆ ಜಮೆಯಾಗುತ್ತಿರುವ ಬಗ್ಗೆ

ಶ್ರೀ ಕೆ. ಅಭಯಚಂದ್ರ (ಮೂಡಬಿದ್ರೆ) : ಮಾನ್ಯ ಉಪಾಧ್ಯಕ್ಷರೆ, ಮೂಡಬಿದ್ರೆ ಹೋಬಳಿಯ ನೊಂದಣಿ ಶುಲ್ಕ ಮಂಗಳೂರು ತಾಲ್ಲೂಕಿಗೆ ಪಾವತಿಯಾಗದೇ ಕಾರ್ಕಳ ತಾಲ್ಲೂಕಿಗೆ ಜಮೆ ಆಗುತ್ತಿದೆ. ಇದರಿಂದ ಮೂಡಬಿದ್ರೆ ಹೋಬಳಿಯ ಅಭಿವೃದ್ಧಿ ಕಾಮಗಾರಿಗೆ ಧಕ್ಕೆ ಆಗಿದೆ. ಈ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಾಕ್ಷರೆ, ಮೂಡಬಿದ್ರೆ